

# ಮತ್ತೆ ಹೆಬ್ಬೀಕರ್!



ಮನೋವೈಜ್ಞಾನಿಕ ಕಥಾವಸ್ತುವಿನ ಸಿನಿಮಾಗಳ ಜೊತೆಗೆ ನೆನಪಿಗೆ ಬರುವ ಹೆಸರು ಸುರೇಶ್ ಹೆಬ್ಳೀಕರ್ ಅವರದು. ಅವರ ಹೊಸ ಚಿತ್ರ 'ಮನಮಂಥನ' ವರ್ತಮಾನದ ಬಿಕ್ಕಟ್ಟುಗಳ ವಿಶ್ಲೇಷಣೆಯ ವಿಶಿಷ್ಟ ಪ್ರಯತ್ನ.

ದೈವದ ಕಥೆಗಳ ಸಿನಿಮಾಗಳು ಕನ್ನಡದ ಪ್ರೇಕ್ಷಕರನ್ನು ಕಾಡುತ್ತಿರುವ ಸಂದರ್ಭದಲ್ಲಿ, ಈ ಹೊತ್ತಿನ ತವಕತಲ್ಲಣಗಳ ನೈಜಕಥನವನ್ನು ಸುರೇಶ್ ಹೆಬ್ಳೀಕರ್ ಚಿತ್ರರಸಿಕರಿಗೆ ತೋರಿಸುವ ಉತ್ಸಾಹದಲ್ಲಿದ್ದಾರೆ. ಅವರ ನಿರ್ದೇಶನದ ಹೊಸ ಸಿನಿಮಾ 'ಮನಮಂಥನ' ಈಗ ತೆರೆಗೆ ಸಿದ್ಧವಾಗಿದೆ.

ಕನ್ನಡದಲ್ಲಿ ಮನೋವೈಜ್ಞಾನಿಕ ಸಿನಿಮಾಗಳ ಜೊತೆಜೊತೆಗೆ ನೆನಪಾಗುವ ಹೆಸರು ಸುರೇಶ್ ಹೆಬ್ಳೀಕರ್ ಅವರದು. 'ಆಲೆಮನೆ', 'ಕಾಡಿನಬೆಂಕಿ', 'ಆಗಂತುಕ', 'ಪ್ರಥಮ ಉಷಾಕಿರಣ' ಚಿತ್ರಗಳು ಅವರಿಗೆ ಹೆಸರು ತಂದುಕೊಟ್ಟಿದ್ದವು. ಆದರೆ, 'ಚಮತ್ಕಾರ' ಸಿನಿಮಾ ನಿರೀಕ್ಷಿತ ಗೆಲುವು ಸಾಧಿಸದೇ ಹೋದಾಗ ಹೆಬ್ಳೀಕರ್ ಸಿನಿಮಾದಿಂದ ಕೊಂಚ ಅಂತರ ಕಾದುಕೊಂಡಿದ್ದರು. 'ಈ ಪಾತ್ರವನ್ನು ನೀವೇ ಮಾಡಬೇಕು' ಎಂದು ಪರಿಚಿತರು ಒತ್ತಾಯಿಸಿದಾಗ ನಟಿಸುವುದನ್ನು ಹೊರತುಪಡಿಸಿದರೆ, ಗಾಂಧಿನಗರದಿಂದ ಅವರು ದೂರವೇ ಉಳಿದಿದ್ದರು.

ಪರಿಸರ ಸಂರಕ್ಷಣೆಯ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಂಡಿದ್ದು ಕೂಡ ಅವರ ಸಿನಿಮಾ ನಂಟು ಕ್ಷೀಣಿಸಲು ಕಾರಣವಾಗಿತ್ತು. ಇಂಥ ಹೆಬ್ಳೀಕರ್ ಮತ್ತೆ ಸಿನಿಮಾ ಮಾಡಲು ಎರಡು ಕಾರಣಗಳಿವೆ. ಮೊದಲನೆಯದು 'ನೀವ್ಯಾಕೆ ಸಿನಿಮಾ ಮಾಡುತ್ತಿಲ್ಲ' ಎಂದು ಹೋದಲ್ಲಿ ಬಂದಲ್ಲೆಲ್ಲ ಸಿಕ್ಕವರೆಲ್ಲ ಕೇಳುತ್ತಿದ್ದುದು. ಮತ್ತೊಂದು ಕಾರಣ, ಡಾ. ಅಶೋಕ ಪೈ ಅವರ 'ಸಿನಿಮಾ ಮಾಡಿ' ಎನ್ನುವ ಪ್ರೀತಿಯ ಒತ್ತಾಯ. ಈ ಒತ್ತಡ–ಪ್ರೀತಿಗಳಿಗೆ ಮಣಿದು ಹೆಬ್ಳೀಕರ್ ಮತ್ತೆ ಸಿನಿಮಾ ಮಾಡಿದ್ದಾರೆ.

ಡಾ. ಅಶೋಕ ಪೈ ಅವರು ಹೇಳಿದ ಸತ್ಯಘಟನೆಗಳನ್ನು ಆಧರಿಸಿ 'ಮನಮಂಥನ' ಸಿನಿಮಾ ರೂಪುಗೊಂಡಿದೆಯಂತೆ. ಪೈ ಅವರೇ ಸಿನಿಮಾ ನಿರ್ಮಾಣದ ಹೊಣೆಯನ್ನೂ ಹೊತ್ತಿದ್ದಾರೆ. ಅಪ್ಪ–ಮಗನ ಸಂಬಂಧದ ಮೂಲಕ ಸಮಕಾಲೀನ ಸಮಾಜದ ಬಿಕ್ಕಟ್ಟುಗಳನ್ನು ವಿಶ್ಲೇಷಿಸುವ ಪ್ರಯತ್ನ ಚಿತ್ರದಲ್ಲಿದೆಯಂತೆ. ತಮ್ಮ ಹಿಂದಿನ ಸಿನಿಮಾಗಳಿಗಿಂತಲೂ 'ಮನಮಂಥನ' ಸಂಪೂರ್ಣವಾಗಿ ಭಿನ್ನವಾಗಿದೆ ಎನ್ನುವ ಹೆಬ್ಳೀಕರ್, ಈ ಸಿನಿಮಾದ ಮೂಲಕ ಯುವ ತಲೆಮಾರಿನ ತವಕತಲ್ಲಣಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನೂ ಮಾಡಿದ್ದಾರಂತೆ.

'ಮನಮಂಥನ' ಚಿತ್ರದ ತಾರಾಗಣ ಹಳೆ ಬೇರು – ಹೊಸ ಚಿಗುರಿನಂತಿದೆ. ಅನುಭವಿ ರಮೇಶ್‌ಭಟ್ ತಂದೆಯ ಪಾತ್ರದಲ್ಲಿ ನಟಿಸಿದ್ದಾರೆ, ಹೊಸ ಹುಡುಗ ಕಿರಣ್ ರಜಪೂತ್ ಮಗನ ಪಾತ್ರದಲ್ಲಿ ನಟಿಸಿದ್ದಾರೆ. ಅರ್ಪಿತಾ ಹಾಗೂ ಸುಮನ್ ಎನ್ನುವ ಹೊಸ ಪ್ರತಿಭೆಗಳ ಜೊತೆಗೆ ಹೆಬ್ಳೀಕರ್ ಕೂಡ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. 'ರಮೇಶ್‌ಭಟ್ ಅದ್ಭುತವಾಗಿ ನಟಿಸಿದ್ದಾರೆ' ಎನ್ನುವ ಹೆಬ್ಳೀಕರ್, ಹೊಸ ಪ್ರತಿಭೆಗಳು ತಮ್ಮ ಚಿತ್ರದ ಜೀವಂತಿಕೆಯನ್ನು ಹೆಚ್ಚಿಸಿದ್ದಾರೆ ಎಂದು ಮೆಚ್ಚಿಕೊಳ್ಳುತ್ತಾರೆ.

ಪಿ. ರಾಜನ್ ಛಾಯಾಗ್ರಹಣ, ಪ್ರವೀಣ್ ಡಿ. ರಾವ್ ಸಂಗೀತ 'ಮನಮಂಥನ' ಚಿತ್ರಕ್ಕಿದೆ. ದೊಡ್ಡ ಬಜೆಟ್‌ನ ಹಾಗೂ ತಾರಾವರ್ಚಸ್ಸಿನ ನಟರ ಸಿನಿಮಾಗಳು ತೆರೆಗೆ ಅಪ್ಪಳಿಸುತ್ತಿರುವ ಸಂದರ್ಭದಲ್ಲಿ, ತಮ್ಮ ಕಥೆಯ ಗಟ್ಟಿತನವನ್ನೇ ನಂಬಿ ಸುರೇಶ್ ಹೆಬ್ಳೀಕರ್ ಪ್ರೇಕ್ಷಕರ ಮುಂದೆ ಬರುವ ಪ್ರಯತ್ನದಲ್ಲಿದ್ದಾರೆ. ಆಗಸ್ಟ್ ತಿಂಗಳ ಕೊನೆಯಲ್ಲಿ ಅಥವಾ ಸೆಪ್ಟೆಂಬರ್‌ನಲ್ಲಿ 'ಮನಮಂಥನ' ತೆರೆಕಾಣಲಿದೆ.

■ ರಘು